**ಓ.ಎಸ್. ಸಂಖ್ಯೆಃ 236/2014**

**ಡಿ.ಡಬ್ಲ್ಯೂಃ 2**

ದಿನಾಂಕಃ 19.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಯ ಪರ ವಕೀಲರಿಂದ**

1. ವಾದಿ ಹಾಗೂ ಉಳಿದ ಪ್ರತಿವಾದಿಗಳು ಹಚ್ಚೋಚ್ಚಿ ಗ್ರಾಮ ನಿವಾಸಿಗಳು. ವಾದಿಯ ಗಂಡ ಕೊಣ್ಣೆರು ಹನುಮಂತಪ್ಪ ಈಗ ಮರಣ ಹೊಂದಿದ್ದಾರೆ. 2 ನೇ ಪ್ರತಿವಾದಿಯ ಗಂಡ ನರಸಿಂಗಪ್ಪ ಅವರು ಸಹ ಈಗ ಮರಣ ಹೊಂದಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆ ಹಾಗೂ ಸಹೋದರರು ಬಲಾಢ್ಯರು ಹಾಗೂ ರಾಜಕೀಯ ಪ್ರಭಾವ ಹೊಂದಿರುವ ವ್ಯಕ್ತಿಗಳು ಎಂದರೆ ಸರಿ. ವಾದಿ ತಂದೆ ತಾಯಿ ಮರಣ ಹೊಂದಿದ್ದು, ಆಕೆಗೆ ಕಿರಿಯ ಸಹೋದರ ಇದ್ದಾನೆ ಎಂದರೆ ಸರಿ. ವಾದಿ ಅರ್ಥಿಕವಾಗಿ ಬಲಾಢ್ಯರಲ್ಲ ಎಂದರೆ ಸರಿ.

2. 1 ನೇ ಪ್ರತಿವಾದಿಯಿಂದ ನಾನು ಹಾಗೂ 7 ನೇ ಪ್ರತಿವಾದಿ ಸರ್ವೆ ನಂ 223/ಎ ರಲ್ಲಿ 3 ಎಕರೆ, 348 ಸಿ/1 ರಲ್ಲಿ 2.89 ಎಕರೆ, 348/ಸಿ/2 ರಲ್ಲಿ 0.70 ಎಕರೆ ಖರೀದಿ ಮಾಡಿದ ನಂತರ 2 ನೇ ಪ್ರತಿವಾದಿಯ ತಂದೆ ಕಡೆಯವರು ಪಂಚಾಯತಿ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಆ ಪಂಚಾಯತಿಯಲ್ಲಿ 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಯು ಸರ್ವೆ ನಂ 175 ಎ/1 ರಲ್ಲಿ 3.65 ಎಕರೆ ಆಸ್ತಿಯನ್ನು ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾನ ಪತ್ರಕ್ಕೆ ನನ್ನ ಖಾಸ ಅಣ್ಣ ಎಂ ಚನ್ನಬಸವನಗೌಡ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದರಂತೆ 2 ನೇ ಪ್ರತಿವಾದಿ ಹೆಸರಿಗೆ ಹಕ್ಕು ಬದಲಾವಣೆ ಆಯಿತು ಎಂದರೆ ಸರಿ. ನಮಗೆ ಮಾರಾಟ ಮಾಡಿದ ಆಸ್ತಿಗಳು ಹಾಗೂ 2 ನೇ ಪ್ರತಿವಾದಿಗೆ ದಾನ ಕೊಟ್ಟ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳು ಸರಿಯಲ್ಲ.

3. ಆಸ್ತಿಯ ಪಾಲು ವಿಭಾಗಕ್ಕೆ ಸಂಬಂದಪಟ್ಟಂತೆ ಊರಿನಲ್ಲಿ ಹಿರಿಯರು ಪಂಚಾಯತಿ ಮಾಡಿದ ಬಗ್ಗೆ ಗೊತ್ತು. ಆ ಪಂಚಾಯತಿಯಲ್ಲಿ ವಾದಿಗೆ 1 ಎಕರೆ 25 ಸೆಂಟ್ಸ ಜಮೀನು ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಗಳಲ್ಲಿ ಪಾಲು ಹೊಂದಿದ್ದಾಳೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**